ಹಾದಿಯಲ್ಲಿ ಹೆಮ್ಮರ, ಚಿಟ್ಟೆ, ಮಿಡತೆ, ಬೆಳಕು, ಕತ್ತಲೆ ಮೊದಲಾದ ರೂಪಕಗಳು ಈಗಾಗಲೇ ನಮ್ಮ ಭಾವಕೋಶದಲ್ಲಿ ಬೇರೆ ಬೇರೆ ಬಗೆಯಲ್ಲಿ ನೆಲೆಗೊಂಡಿವೆ. ಆಳುವ ಶಕ್ತಿಗಳು ನಮ್ಮ ಮಾನಸಿಕ ಲೋಕವನ್ನು ನಿಯಂತ್ರಿಸುವುದೂ ಇಂತಹ ಪರಿಕಲ್ಪನೆ, ರೂಪಕಗಳ (ಐಡಿಯಾ) ಮೇಲೆಯೇ. ಇವುಗಳನ್ನು ಒಡೆಯುವುದೂ ಕೂಡಾ ಪ್ರತಿರೋಧದ ಒಂದು ಬಗೆಯೇ ಆಗಿದೆ. ಈ ಕವನ ಸಂಕಲನವನ್ನು ಓದುವ ಸಂದರ್ಭದಲ್ಲಿ ಕವಿ ಇವುಗಳಾಚೆಗೆ ಹೊಸ ಅರ್ಥಲೋಕವನ್ನು ಕಟ್ಟಿಕೊಡುತ್ತಾರೆ ಎನ್ನುವುದು ಮನದಟ್ಟಾಗುತ್ತಾ ಹೋಗುತ್ತದೆ. ಪ್ರಾತಿನಿಧಿಕವಾಗಿ ಉದಾಹರಣೆಯೊಂದನ್ನು ಹೇಳುವುದಾದರೆ ಇಲ್ಲಿ ಕತ್ತಲು ಮತ್ತು ಬೆಳಕು ಎನ್ನುವುದು 'ಬೈನರಿ' ಪದಗಳಲ್ಲ. ಅವು ಒಂದರ ಜೊತೆಗೊಂದು ಸೇರಿಕೊಂಡವು ಎಂದೇ ನನಗನಿಸುತ್ತದೆ.


ನೋವನ್ನು, ಸಂಘರ್ಷವನ್ನು, ಚೈತನ್ಯವನ್ನು ಅವುಗಳ ಸಂಕೀರ್ಣತೆಯೊಂದಿಗೆ ಇಲ್ಲಿ ಕವಿತೆಗಳು ಮುಖಾಮುಖಿಯಾಗುತ್ತವೆ. 'ಹೆಮ್ಮರ' ಎನ್ನುವುದು ಹಲವಾರು ಬೇರು ಬಿಳಲುಗಳ ಮೂಲಕ ಹರಡಿಕೊಂಡ ಮರ. ಇಲ್ಲೇ ಅಸಲು ಕಸುಬಿನ ಗಿರಾಕಿಯೊಬ್ಬನು,

**'ಹಣ್ಣು ಮಾರುವವನೆಂದರೆ ಮಣ್ಣು ಮಾರುತಿಹನು**
**ಹುಣ್ಣಾದೀತು ನೆಲತಾಯಿಯ ಮೊಲೆತೊಟ್ಟುಗಳಿಗೆ'**

-ಎಂದು ಕವಿ ಬರೆಯುತ್ತಾರೆ. ಇದರ ಅಡಿಯಲ್ಲೇ ಶಿಥಿಲಗೊಳಿಸುವ ಗೆದ್ದಲುಗಳು, ಸುಡುವ ಕಿಡಿ ಎಲ್ಲವೂ ಇದೆ. ಬಿರುಕುಮರ, ಬುರುಡೆಯ ಮರಗಳ ಮಧ್ಯೆ ಜೀವಮರ, ಘಮಲಿನ ಮರ, ಬುದ್ಧಮರವೂ ಇವೆ. ಕವಿ ಇವುಗಳನ್ನು ತಮ್ಮದೇ ಆದ ಚಾತುರ್ಯದೊಂದಿಗೆ ಕಾಣಿಸುತ್ತಾ ಹೋಗುತ್ತಾರೆ.

ಇಲ್ಲಿ ಇರುವ ಎಲ್ಲ ಕವಿತೆಗಳಲ್ಲಿ ಕಾರುಣ್ಯವು ಸ್ಥಾಯಿಭಾವವಾಗಿ ಹೊರಹೊಮ್ಮಿದೆ. ಅಂದರೆ ಎಂತಹ ದುರ್ಭರ ಸ್ಥಿತಿಯಲ್ಲಿಯೂ ಕಳೆದುಹೋಗದ ಜೀವಪ್ರೇಮ ನಮ್ಮನ್ನು ಆರ್ದ್ರವಾಗಿಸುತ್ತದೆ.

ಸಾವಿರಾರು ವರ್ಷಗಳಿಂದ ನೋವುಣ್ಣುತ್ತಾ ಬಂದಿರುವ ಸಮುದಾಯಗಳ ಅಭಿವ್ಯಕ್ತಿಯೆಂಬುದು ಆಕ್ರೋಶವಾಗಿ ಹೊಮ್ಮಿದ ಕಾಲಘಟ್ಟವನ್ನು ನಾವು ನೋಡಿದ್ದೇವೆ. ಈ ಆಕ್ರೋಶದ ಜೊತೆಗೆ ಎಂದಿಗೂ




ಹೆಬ್ಬಿರುಳಿನ ನಿಬ್ಬೆರಗು (ಪದ್ಯಗಳು)
ಲೇಖಕ: ಎಸ್. ಮಂಜುನಾಥ
ಪುಟ: 68, ಬೆಲೆ: ರೂ 80
ಪ್ರಕಾಶಕರು: ಕೌದಿ ಪ್ರಕಾಶನ
ಸಂಪರ್ಕಕ್ಕೆ: 9008660371

ಮುಕ್ಕಾಗದ ಜೀವಪ್ರೀತಿಯ ಒರತೆ ಇದೆ. ಇದು ಎಂತಹ ಬಿರುಬಿಸಿಲಿನಲ್ಲೂ ಆರುವುದಿಲ್ಲ. ಭಾವತೀವ್ರತೆಯ ಅಭಿವ್ಯಕ್ತಿಯ ಜೊತೆಗೆ ಚಿಂತನ ಶೀಲತೆಯೂ ಇದೆ. ಆರದ ನೋವಿನ ಜೊತೆಗೆ ಮುಕ್ಕಾಗದ ಜೀವನ ಪ್ರೀತಿ ಎಲ್ಲ ಕವಿತೆಗಳೊಳಗೆ ಸ್ರೋತವಾಗಿ ಹರಿಯುತ್ತಿದೆ. ದಮನಿತ ಲೋಕದ ಹೊಸ ನುಡಿಗಟ್ಟುಗಳು ಎಸ್. ಮಂಜುನಾಥ್ ಅವರ ಕವಿತೆಗಳಲ್ಲಿ ಒಡಮೂಡಿವೆ.

ಸಂಕಲನದಲ್ಲಿ ಗಮನ ಸೆಳೆದ ಮತ್ತೊಂದು ವಿಷಯವೆಂದರೆ, 'ಮರ್ಯಾದೆಗೇಡು ಹತ್ಯೆ' ಇದು ಈ ಲೋಕದಲ್ಲಿ ಮನುಷ್ಯ ಪ್ರೀತಿಗೇ ಮಾಡುವ ಅಪಚಾರ. ಯಾವುದೋ ಕಟ್ಟುಕಟ್ಟಳೆಗಳೆಂಬ ಆಲದ ಬಿಳಿಲಿಗೆ ಜೋತುಬಿದ್ದು, ಹೆತ್ತು ಸಾಕಿ, ಸಲಹಿದ